ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಹಾಗೂ ಸಂಸ್ಕರಣಾ ಘಟಕಗಳ ನಿರ್ಮಾಣಕ್ಕಾಗಿ ಸರ್ಕಾರ ಮಂಜೂರು ಮಾಡಿರುವ ಭೂಮಿಗಳ ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಆ) ಹೌದು,

ಇ) ಮಂಜೂರು ಮಾಡಿರುವ ಭೂಮಿಯನ್ನು ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಮಾತ್ರ ಉಪಯೋಗಿಸಬೇಕೆಂದು ಷರತ್ತು ವಿಧಿಸಲಾಗಿದೆ. ಈ ಜಾಗಗಳನ್ನು ಬೇರೆ ಯಾವುದೇ ರೀತಿಯ ಉಪಯೋಗಕ್ಕೆ ಬಳಸಿಕೊಳ್ಳಲಾಗುತ್ತಿಲ್ಲ.

ಈ ರೀತಿ ಮಂಜೂರು ಮಾಡಿದ ಪ್ರದೇಶಗಳನ್ನು ಘನತ್ಯಾಜ್ಯ/ಸಂಸ್ಕರಣಾ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ಬಿಬಿಎಂಪಿ ವತಿಯಿಂದ ಕೈಗೊಂಡ ಕ್ರಮಗಳ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಿದೆ.

ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಕೆಳಕಂಡ ಸ್ಥಳಗಳಲ್ಲಿ ಘಟಕಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ.

1) ಸರ್ವೆ ನಂ. 08, ಮಾವಳ್ಳಿಪುರ, ಹೆಸರಘಟ್ಟ ಹೋಬಳಿ, ಬೆಂಗಳೂರು.

2) ಸರ್ವೆ ನಂ. 143, ಸುಬ್ಬರಾಯನಪಾಳ್ಯ, ಕುಂಬಳಗೂಡು ಹಳ್ಳಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.

3) ಸರ್ವೆ ನಂ. 1, 2, 3, 7 ಮತ್ತು 11, 8 ಪಿಪಿ 1, ಚಿಗರನಹಳ್ಳಿ ಗ್ರಾಮ, ದೊಡ್ಡಬೆಳವಂಗಲ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು,

4) ಗೋರೂರು ಗ್ರಾಮ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ

5) ಸರ್ವೆ ಸಂಖ್ಯೆ: 85, ಕನ್ನಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.

6) ಸರ್ವೆ ಸಂಖ್ಯೆ: 80, ಗಿಡ್ಡೇನಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.

7) ಸರ್ವೆ ಸಂಖ್ಯೆ: 30 8 31, ಕೂಡ್ಲುಗ್ರಾಮ, ಮಡಿವಾಳ ಪೋಸ್ಟ್, ಹೊಸೂರು ರಸ್ತೆ, ಬೆಂಗಳೂರು.

8) ಸರ್ವೆ ಸಂಖ್ಯೆ: 31, ಚಿಕ್ಕನಾಗಮಂಗಲ, ಸರ್ಜಾಪುರ ಹೋಬಳಿ, ಅನೇಕಲ್ ತಾಲ್ಲೂಕು.

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1605 ಕ್ಕೆ ಅನುಬಂಧ–1

ಪೌರ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ವಿಲೇವಾರಿಗೆ ಸರ್ಕಾರ/ಬಿ.ಡಿ.ಎ/ಕೆ.ಐ.ಎ.ಡಿ.ಬಿ ಯಿಂದ ಪಾಲಿಕೆಗೆ ಮಂಜೂರು ಮಾಡಿರುವ ಸ್ವತ್ತುಗಳ ವಿವರಗಳು

ಕ್ರ ಸಂ	ಸ್ಥಳ	ಸರ್ವೆ ನಂ	ವಿಸ್ತೀರ್ಣ (ಎಕರೆ–ಗುಂಟೆ)
1.	ಕನ್ನಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.	85	29–03
2.	ಗಿಡ್ಡೇನಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.	80	50–00
3.	ಚಿಕ್ಕನಾಗಮಂಗಲ, ಸರ್ಜಾಪುರ ಹೋಬಳಿ, ಅನೇಕಲ್ ತಾಲ್ಲೂಕು.	31	31–21
4.	ಕೂಡ್ಲು ಗ್ರಾಮ, ಮಡಿವಾಳ ಪೋಸ್ಟ್, ಹೊಸೂರು ರಸ್ತೆ, ಬೆಂಗಳೂರು	30&31	30–00
5.	ದೊಡ್ಡಬಿದರಕಲ್ಲು, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.	33	12.00
6.	ಸಿಗೇಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.	48	7.00
7.	ಚೀಮಸಂದ್ರ, ಬಿದರಹಳ್ಳಿ ಹೋಬಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು	145	15.00
8.	ಅನೇಕಲ್ ತಾಲ್ಲೂಕು ತಮ್ಮನಾಯಕನಹಳ್ಳಿ	23	207–24
9.	ಆನೇಕಲ್ ತಾಲ್ಲೂಕು ಬಗ್ಗನದೊಡ್ಡಿ (ಬಿಬಿಎಂಪಿ)	96	51.00
10.	ಎಸ್.ಬಿಂಗಿಪುರ	179	20.6

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1605ಕ್ಕೆ

ಅನುಬಂಧ–2

ಪೌರ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ವಿಲೇವಾರಿಗೆ ಸರ್ಕಾರ/ಬಿ.ಡಿ.ಎ/ಕೆ.ಐ.ಎ.ಡಿ.ಬಿ ಯಿಂದ ಪಾಲಿಕೆಗೆ ಮಂಜೂರು ಮಾಡಿರುವ ಪ್ರದೇಶಗಳಲ್ಲಿ ಕೈಗೊಂಡಿರುವ ಹೊಸ ಯೋಜನೆಗಳ ವಿವರಗಳು

ಕ್ರ ಸಂ	ಸ್ಥಳ	ಸರ್ವೆ ನಂ	ವಿಸ್ತೀರ್ಣ (ಎಕರೆ–ಗುಂಟೆ)	ಷರಾ
1.	ಕನ್ನಹಳ್ಳಿ ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.	85	29–03	ಪ್ರತಿದಿನ 600 ಮೆ.ಟನ್ ಸಾಮರ್ಥ್ಯವುಳ್ಳ ಘನತ್ಯಾಜ್ಯದಿಂದ ವಿದ್ಯುತ್‌ಅನ್ನು ಉತ್ಪಾದಿಸುವ ಯೋಜನೆ ಪ್ರಾರಂಭಿಸಲು ಟೆಂಡರ್ ಆಹ್ವಾನಿಸಲಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ. ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ರವರಿಗೆ 5 ಏಕರೆ ಜಮೀನನ್ನು ಹೋಟೆಲ್ ತ್ಯಾಜ್ಯ ಸಂಸ್ಕರಣೆಗಾಗಿ ಲೀಸ್ ಮೇಲೆ ನೀಡಲಾಗಿದೆ.
2.	ಗಿಡ್ಡನಹಳ್ಳಿ ಯಶವಂತಪುರ ಹೋಬಳಿ. ಬೆಂಗಳೂರು ಉತ್ತರ ತಾಲ್ಲೂಕು.	80	50–00	ಸದರಿ ಪ್ರದೇಶಗಳಲ್ಲಿ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯ ಸಂಸ್ಕರಿಸಲು ಮೆ: ಸಿಸ್ಟಾ ವೇಸ್ಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರ ಪ್ಲಾಸ್ಮ ಟಾರ್ಚ್ ತಂತ್ರಜ್ಞಾನದ ಘನತ್ಯಾಜ್ಯ ನಿರ್ವಹಣೆಯ ಪ್ರಸ್ತಾವನೆಯ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

3.	ಚಕ್ಕನಾಗಮಂಗಲ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು	31	31-21	ಸದರಿ ಪ್ರದೇಶದಲ್ಲಿ ಕರ್ನಾಟಕ ಕಾಂಪೋನೆಂಟ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆರವರ ಸಹಭಾಗಿತ್ವದೊಂದಿಗೆ ತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ಉತ್ಪಾದಿಸುವ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
4.	ಕರ್ನಾಟಕ ಕಾಂಪೋನೆಂಟ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್, ಹರಳುಕುಂಟಿ, ಹೊಸೂರು ರಸ್ತೆ,ಬೆಂಗಳೂರು		30-00	ಸದರಿ ಪ್ರದೇಶದಲ್ಲಿ ಕರ್ನಾಟಕ ಕಾಂಪೋನೆಂಟ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆರವರ ಸಹಭಾಗಿತ್ವದಿಂದ ತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ಉತ್ಪಾದಿಸುವ ಘಟಕ ಸ್ಥಾಪಿಸಲಾಗುತ್ತಿದೆ. ಒಟ್ಟು 30 ಎಕರೆಯಿದ್ದು, ಈ ಪೈಕಿ 16 ಎಕರೆ ಪಾಲಿಕೆಯ ಸ್ವತ್ತಾಗಿರುತ್ತದೆ. ಸದರಿ ಘಟಕದ ಸುತ್ತಲೂ ಜನವಸತಿ ಪ್ರದೇಶ ನಿರ್ಮಾಣವಾಗಿರುವುದರಿಂದ ಸದರಿ ಘಟಕಕ್ಕೆ ತ್ಯಾಜ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಸದರಿ ಘಟಕವನ್ನು ಜನವರಿ 2013 ರಿಂದ ಪುನರಾರಂಭಿಸಲಾಗಿದ್ದು, ಪ್ರತಿ ನಿತ್ಯ 300 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸಲಾಗುತ್ತಿದೆ. ಹಾಗೂ ಸದರಿ ಘಟಕದ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯ ಮೂಲಭೂತ ಸೌಕರ್ಯಗಳನ್ನು ಪಾಲಿಕೆ ವತಿಯಿಂದ ಕಲ್ಪಿಸಲಾಗುತ್ತಿದೆ.
5.	ದೊಡ್ಡಬಿದರಕಲ್ಲು, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.	33	12.00	ಸದರಿ ಘಟಕದ ಸುತ್ತಲೂ ಜನವಸತಿ ಪ್ರದೇಶ ನಿರ್ಮಾಣವಾಗಿರುವುದರಿಂದ ಸದರಿ ಜಾಗದಲ್ಲಿ ಯಾವುದೇ ಘಟಕ ನಿರ್ಮಿಸಲು ಸಾಧ್ಯವಾಗಿರುವುದಿಲ್ಲ.

6.	ಸೀಗೆಹಳ್ಳಿ ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.	48	7.00	ಸದರಿ ಪ್ರದೇಶವು ಗುಡ್ಡಗಾಡಿನ ಪ್ರದೇಶವಾಗಿದ್ದು, ಸದರಿ ಪ್ರದೇಶವನ್ನು ಸಮತಟ್ಟು ಮಾಡಿ ಘನತ್ಯಾಜ್ಯ ಸಂಸ್ಕರಿಸುವ ಯೋಜನೆಗಳಿಗೆ ಬಳಸಲಾಗುವುದು.
7.	ಚೀಮಸಂದ್ರ, ಬದರಹಳ್ಳಿ ಹೋಬಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು	145	15.00	ಸದರಿ ಪ್ರದೇಶದಲ್ಲಿ ತಾತ್ಕಾಲಿಕ ಲ್ಯಾಂಡ್‌ಫಿಲ್ ನಿರ್ಮಿಸಿ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿತ್ತು.. ಸದರಿ ಜಾಗವು ತ್ಯಾಜ್ಯವಿಲೇವಾರಿಯಿಂದ ಪೂರ್ಣವಾಗಿ ಭರ್ತಿಯಾಗಿರುವುದರಿಂದ ತ್ಯಾಜ್ಯ ವಿಲೇವಾರಿ ಸ್ಥಗಿತಗೊಳಿಸಲಾಗಿರುತ್ತದೆ. ಹಾಲಿ ಭರ್ತಿಯಾಗಿರುವ ತ್ಯಾಜ್ಯವನ್ನು "Bio Remediation" ತಂತ್ರಜ್ಞಾನದ ಮೂಲಕ ಸಂಸ್ಕರಿಸಿ, ಸದರಿ ಪ್ರದೇಶದಲ್ಲಿ ಪ್ರತಿದಿನ 150 ಮೆ.ಟನ್ ಘನತ್ಯಾಜ್ಯ ಸಂಸ್ಕರಿಸುವ ಸ್ವಯಂ ಚಾಲಿತ ತ್ಯಾಜ್ಯ ವಿಂಗಡಣೆ ಘಟಕ ಸ್ಥಾಪಿಸಲು ಯೋಜನೆ ರೂಪಿಸಲಾಗುವುದು.